R No KRNN 12

12 - 2 - 1975

ಸ್ವರ್ಣ ಮಹೋತ್ಸವ ಸಂಭ್ರಮದ ಪತ್ರಿಕೆ

in ★ ★ ★ ★ ★

58 th Year ನೇ ವರ್ಷ

ಸತ್ಯವಾದಿ
SATYAVADI

Golden Jubilee Celebrated Paper

Satyavadi Daily Mysore 4

- For Influential Publicity -

ಪ್ರಕಾಶಕರು: ಅರಮನೆ ಸಿರಸ್ತೇದಾರ್ ಎಂ. ವಿ. ಕುಮಾರ್ ಸಂಪಾದಕರು: ಧರ್ಮಸ್ವಾರಸಿರತ ಎಂ. ಎಸ್. ಕೃಷ್ಣಾವ್ [3 ಪೈಸೆ

ಪ್ರಾಮಾಣಿಕರಾಗಿರುವಂತೆ ವಾಣಿಜ್ಯೋದ್ಯಮಿಗಳಿಗೆ ಕರೆ

ಖಂಡನಾ ನಿರ್ಣಯ

ಸೋಮವಾರ ಶಾಸನ ಸಭೆ ಜಂಟಿ ಅಧಿವೇಶನದಲ್ಲಿ ಗೊಂದಲ ಮಾಡಿ ಪ್ರದರ್ಶನ ನಡೆಸಿದ ವಿರೋಧಿ ಪಕ್ಷದ ಸದಸ್ಯರ ಮೇಲೆ ಖಂಡನಾ ಸೂಚನೆಯನ್ನು ತರಲು ಕಾಂಗ್ರೆಸ್ ಶಾಸನ ಸಭೆ ಪಕ್ಷ ನಿರ್ಧರಿಸಿದೆ ಎಂದು ಬೆಂಗಳೂರು ವಾರ್ತೆ

●

ಧಾರಿಯಾ ಸಲಹೆ

ಶ್ರೀ ಜಯಪ್ರಕಾಶ ನಾರಾಯಣ್ ಮತ್ತಿತರ ರಾಷ್ಟ್ರೀಯ ವಿರೋಧಿ ನಾಯಕರೊಡನೆ ಕಾಂಗ್ರೆಸ್ ಪಕ್ಷ ಮಾತುಕತೆ ನಡೆಸಿ ದೇಶವನ್ನು ಎದುರಿಸುತ್ತಿರುವ ಹಿರಿಯ ಸಮಸ್ಯೆಗಳನ್ನು ಕುರಿತು ಐಕ್ಯಮನೋಭಾವಕ್ಕೆ ಬರಲು ಪ್ರಧಾನಿ ಇಂದಿರಾರವರಿಗೆ ಕೇಂದ್ರ ವಸತಿ ಮಂತ್ರಿ ಶ್ರೀ ಧಾರಿಯಾ ಹೇಳಿರುವರೆಂದು ಬೊಂಬಾಯಿ ವಾರ್ತೆ.

★

ಸೇತುವೆ ಮುಗಿಯುವದು

ಕಾರವಾರ ಹಾಗೂ ಪದಾತಿದಳ ನಡುವೆ ಕಾಳಿನದಿ ಮೇಲಿನ ಅತಿ ಉದ್ದದ ಸೇತುವೆ 77 ನೇ ಜೂನ್ ವೇಳೆಗೆ ಪೂರ್ಣಗೊಳ್ಳುವದಾಗಿ ಸೂಪರಿನ್‌ಟೆಂಡಿಂಗ್ ಇಂಜಿನಿಯರ್ ಹುಬ್ಬಳ್ಳಿಯಲ್ಲಿ ತಿಳಿಸಿರುವರು

★

ಅಕ್ಕಿ ಗಿರಣಿ ಮಾಲೀಕರ ಬಂಧನ

ಮೈಸೂರು ನಗರದ ಅಕ್ಕಿ ಗಿರಣಿ ಮಾಲೀಕನೊಬ್ಬನು ಅಕ್ಕಿ ಮತ್ತು ಭತ್ತ ಬಗ್ಗೆ ಕಳ್ಳ ವ್ಯಾಪಾರಕ್ಕೆ ಮಾಡುತ್ತಿದ್ದ ಅಪಾದನೆಗಾಗಿ ಆಂತರಿಕ ರಕ್ಷಣಾ ಶಾಸನದಡಿಗೆ ಬಂಧಿಸಲ್ಪಟ್ಟು ಜೈಲಿಗೆ ಕಳುಹಿಸಲ್ಪಟ್ಟನು.

●

ಸರ್ಕಾರಿ ನೌಕರರು ಚಳುವಳಿ ಹೂಡಿದ ಸಂದರ್ಭದಲ್ಲಿ ಸರ್ಕಾರಿ ನೌಕರರ ಸಂಘದ ವಾರ್ಷಿಕ ಸರ್ವಸಾಧಾರಣ ಸಭೆಯು ಮುದರಂಗಡಿಯಲ್ಲಿ ವಾರ್ತೆ

ಮಂತ್ರಿಗೆ ನೋಟೀಸ್

ಗೋಕಾಕದ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟರು ರೇಷ್ಮೆ ಮಂತ್ರಿ ಶ್ರೀ ಸೌಜಲಗಿ ಹಾಗೂ ಪಾರ್ಲಿಮೆಂಟ್ ಸದಸ್ಯ ಶ್ರೀ ಎ ಕೆ ಕೊಟ್ರಶೆಟ್ಟಿಯವರಿಗೆ 302 ನೇ ವಿಧಿ ಪ್ರಕಾರ ನೋಟ್ಟೀಸು ಕೊಡಲಾಗಿದೆ ಪತ್ತನವನ ತಾಯಿಯಂ-ದೂರಿನ ಮೇಲೆ ಈ ಕ್ರಮ ಈ ಸಂಬಂಧದಲ್ಲಿ (ಈ ಇಬ್ಬರನ್ನು ಬಿಟ್ಟು) ಪೋಲೀಸರು 8 ಮಂದಿ ಮೇಲೆ ಹಾಕಿರುವ ಮೊಕದ್ದಮೆ ಸೆಷನ್ ಕೋರ್ಟ್‌ನಲ್ಲಿದೆ

●

ದೆಹಲಿಯಲ್ಲಿ ಸಭೆ

ಬಂಗ್ಲಾ ದೇಶದ ಪರಿಸ್ಥಿತಿ ಕುರಿತು ಜಯಪ್ರಕಾಶರಿಗೆ ಕಳವಳ ಉಂಟಾಗಿ ಅಂಥ ಪರಿಸ್ಥಿತಿ ಭಾರತದಲ್ಲಿ ಆಗದಂತೆ ಎಚ್ಚರಿಕೆಯಿಂದ ಇರಲು ವಿರೋಧ ಪಕ್ಷಗಳ ನಾಯಕರು ಶ್ರೀ 15 ಹಾಗೂ 16 ರಂದು ಈ ವಿಷಯ ವಿವರವಾಗಿ ಚರ್ಚಿಸಬೇಕೆಂಬ ಅಭಿಪ್ರಾಯದಿಂದ ದೆಹಲಿಯಲ್ಲಿ ಅಂದು ಸಭೆ ಕರೆದಿದ್ದಾರೆ.

●

ಪರಿಸ್ಥಿತಿ ಉತ್ಕಟ

ಪಾಕೇಸ್ತಾನದಲ್ಲಿ ನಿಷೇಧವಾಗಿರುವ ರಾಷ್ಟ್ರೀಯ ಅವಾಮಿ ಪಾರ್ಟಿಯ 300 ಕ್ಕೂ ಹೆಚ್ಚು ನಾಯಕರು ಹಾಗೂ ಅದರ ಅಡಿಳಿತ ವರ್ಗದವರೂ ದಸ್ತಗಿರಿ ಮಾಡಲ್ಪಟ್ಟರುವದಾಗಿ ಬಿ ಬಿ ಸಿ ವರದಿ ಮಾಡಿದೆ ಅಲ್ಲಿ ಪರಿಸ್ಥಿತಿ ಉತ್ಕಟವಾಗಿದೆ.

●

ಮಹಾರಾಷ್ಟ್ರದ ರತ್ನಗಿರಿಯಲ್ಲಿನ ಪುಲೆ ವೈದ್ಯಕೀಯ ವಿಶ್ವವಿದ್ಯಾಲಯದಲ್ಲಿಯ ಆಶ ಎಂಬ ಹೈಬ್ರೀಡ್ ಹಸುವು ನಿಪುಣರಿಗೆ ಆಶ್ಚರ್ಯವುಂಟು ಮಾಡಿದೆ ಅದು ತನ್ನ 22 ತಿಂಗಳಲ್ಲಿ ಪ್ರಥಮ ಕರು ಹಾಕಿತು ಅನಂತರ 8 ತಿಂಗಳಲ್ಲಿ ಇನ್ನೊಂದು ಕರು ಹಾಕಿತು ಈ ಮಧ್ಯೆ ಅದು ದಿನಕ್ಕೆ ಸರಾಸರಿ 7 ವರೆ ಲೀಟರು ಹಾಲು ಕೊಟ್ಟಿದೆ.

ಪ್ಯಾರೋಲ್ ಪನ್ಯಾಸಿ

ಗೋಕಾಕ್— ಇಲ್ಲಿಗೆ 20 ಮೈಲಿ ದೂರದ ರಂಗಪುರಕ್ಕೆ ಒಬ್ಬ ಪನ್ಯಾಸಿ ಒಬ್ಬ ಹುಡುಗ ಆಳಿನೊಡನೆ ಬಂದು ಇಳಿದುಕೊಂಡಿದ್ದ – ಪವಿತ್ರ ಪದಾತಿಳ ಮಂದಿರ್ ಮಠ ಎಂದು ಆ ಸ್ಥಳಕ್ಕೆ ಹೆಸರಿಟ್ಟಿದ್ದ – ಅಲ್ಲಿ ಅನೀತಿ ಕಾರ್ಯ ನಡೆಯುತ್ತಿದ್ದ – ಆ ಸಮಯಗಳಲ್ಲಿ ಹುಡುಗನನ್ನಿ ಹೊರಗೆ ಹುಷಾರಾಗಿ ಕಾವಲಿರಲೂ, ತಾನು ಒಳಗೆ ಕೆಲಸದಲ್ಲಿರುವುದಾಗಿಯೂ ತಿಳಿಸುತ್ತಿದ್ದ – ಭಾನುವಾರವೂ ಈ ಏರ್ಪಾಡು ಮಾಡಿದ – ಹುಡುಗ ಆಳು ಪನ್ಯಾಸಿಯ ಅನೀತಿ ನಡತೆ ಹೊರಪಡಿಸಲು ಬಾಗಿಲನ್ನು ದೊಡ್ಡದಾಗಿ ತೆಗೆದು, ಬೀದಿಯಲ್ಲಿ ಹೋಗುತ್ತಿದ್ದವರನ್ನೆಲ್ಲಾ ಕರೆದ – 16 ವರ್ಷದ ಸುಂದರ ಬಿತ್ತಲೆ ಹುಡುಗಿಯೊಡನೆ ಪನ್ಯಾಸಿ ಬಿತ್ತಲೆಯಾಗಿದ್ದುದು ಹೊರಪಟ್ಟಿತು – ಕ್ರೋಧಗೊಂಡ ಪನ್ಯಾಸಿ ಹುಡುಗನನ್ನು ಥಳಿಸಿದ್ದಲ್ಲದೆ, ಅವನ ಒಂದು ಕಣ್ಣಿನ ಗುಡ್ಡೆಯನ್ನು ಕಿತ್ತು ಹಾಕಿದ – ಪನ್ಯಾಸಿ ದಸ್ತಗಿರಿಮಾಡಲ್ಪಟ್ಟ ಹುಡುಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾನೆ.

●

ನೇತ್ರ ಚಿಕಿತ್ಸಾ ಶಿಬಿರ

ಮೈಸೂರು– ಲಯನ್ಸ್ ಕ್ಲಬ್‌ನವರು ಏರ್ಪಡಿಸಿದ್ದ ಡಾ || ಎಂ. ಸಿ. ಮೋದಿಯವರ ನೇತ್ರ ಚಿಕಿತ್ಸಾ ಶಿಬಿರವು ನಿನ್ನೆ ಪರಿಸಮಾಪ್ತಿಗೊಂಡಿತು – 337 ಜನರಿಗೆ ಅಪರೇಷನ್ ಮಾಡಲಾಯಿತೆಂದು ಪತ್ರಿಕಾಗೋಷ್ಠಿಯಲ್ಲಿ ಡಾಕ್ಟರರು ತಿಳಿಸಿದರು – ಕ್ಲಬ್‌ನ ಅಧ್ಯಕ್ಷ ಶ್ರೀ ಗೋವಿಂದಶೆಟ್ಟಿಯವರೂ, ಕಾರ್ಯದರ್ಶಿ ಶ್ರೀ ನಂಜುಂಡಸ್ವಾಮಿಯವರೂ, ಶಿಬಿರದಲ್ಲಿ 4600 ಜನರ ನೇತ್ರ ಪರೀಕ್ಷೆ ಮಾಡಲಾಯಿತೆಂದೂ, 508 ಜನಗಳಿಗೆ ಉಚಿತ ಔಷಧಿ ಕೊಡಲಾಯಿತೆಂದೂ, 5392 ರೋಗಿಗಳಿಗೆ ಉಚಿತ ಆಹಾರ ಕೊಡಲಾಯಿತೆಂದೂ ತಿಳಿಸಿದರು

●

ಸಂತಾಪ ಸೂಚನೆ

ಮಂಗಳವಾರ ಶಾಸನಸಭೆಗಳು ಮಹಾರಾಜ ಜಯಚಾಮರಾಜ ಒಡೆಯರ್‌ರವರ ನಿಧನದ ಬಗ್ಗೆ ಸಂತಾಪಿಸಿ ಮುಂದುವರಿಯಿತು.

★

ಗೂಳಿಗಳ ಆಗಮನ

ವಿಮಾನದಲ್ಲಿ 20 ಗೂಳಿಗಳೂ 80 ಹಸುಗಳೂ ಡೆನ್ಮಾರ್ಕಿನಿಂದ ಡೇನಿಷ್ ಆಂತರರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆ ಸಹಾಯದಿಂದ ಬಂದವು ಮದ್ರಾಸಿಗೆ ಬಂದಿರುವ ಇವು ಬನ್ನೇರುಘಟ್ಟದ ಕೃಷಿ ಕ್ಷೇತ್ರಕ್ಕೆ ಬರುವುದು.

●

ಬಿರ್ಲಾರ ಬೋಧನೆ

ಭಾರತ ವಾಣಿಜ್ಯ ಹಾಗೂ ಕೈಗಾರಿಕೆ ಸಂಸ್ಥೆ ಅಧ್ಯಕ್ಷ ಶ್ರೀ ಕೆ. ಕೆ. ಬಿರ್ಲಾರವರು ಪಾಟ್ನಾದಲ್ಲಿ ತಮಗಿತ್ತ ಸತ್ಕಾರಕೂಟದಲ್ಲಿ ಭಾಷಣ ಮಾಡುತ್ತಾ, ವಾಣಿಜ್ಯೋದ್ಯಮಿಗಳು ತಮ್ಮ ವಸ್ತುಗಳಿಗೆ ನ್ಯಾಯಬೆಲೆ ತೆಗೆದುಕೊಳ್ಳಬೇಕೆಂದು ಪ್ರಸ್ತುತ ಆರ್ಥಿಕ ಉತ್ಕಟ ಪರಿಸ್ಥಿತಿಯ ಪ್ರಯೋಜನ ಪಡೆಯಲು ಹೆಚ್ಚು ಬೆಲೆ ತೆಗೆದುಕೊಳ್ಳಬಾರದೆಂದು ತಿಳಿಸಿದರು.

★

ಆತ್ಮಹತ್ಯೆ

ಕಳೆದ ವಾರ ಜವಾನ್ ವಿಮಾನದಲ್ಲಿ ಮಿಶ್ರಿತ ಆಹಾರದಿಂದ ಪ್ರಯಾಣೀಕರಲ್ಲಿ ತೊಂದರೆಗೀಡಾದುದಕ್ಕೆ ಆಹಾರ ಸರಬರಾಜು ಸಂಸ್ಥೆಯ ವ್ಯವಸ್ಥಾಪಕ ಈ ತಪ್ಪಿನ ಹೊಣೆಗಾರಿಕೆಗಾಗಿ ಆತ್ಮಹತ್ಯೆ ಮಾಡಿಕೊಂಡನೆಂದು ಟೋಕಿಯೋ ವಾರ್ತೆ.

★ ಅಂತರರಾಷ್ಟ್ರ ಅಭಿವೃದ್ಧಿ ಸಂಸ್ಥೆ ರಕ್ಷಿತ ಅಭಾವ ಭಾಗಗಳಿಗೆ ಪರಿಹಾರವಾಗಿ 50 ಸಾವಿರ ಟನ್ ಧಾನ್ಯ ಕೊಟ್ಟಿದೆ

(2)

ಚುನಾವಣೆಗೆ ಬಹಿಷ್ಕಾರ

ಬೆಂಗಳೂರು— ಮಾರಕ್ಸಿಸ್ಟ್ ಕಮ್ಯೂನಿಸ್ಟರು ಈ ವರ್ಷ ದಿಢೀರ್ ಚುನಾವಣೆ ಘೋಷಿಸಿದರೂ, 1972 ರಲ್ಲಿ ಪಶ್ಚಿಮ ಬಂಗಾಳಾದಲ್ಲಿ ಚುನಾವಣೆ ಬಹಿಷ್ಕರಿಸಿದ್ದಂತೆ ಬಹಿಷ್ಕರಿಸುವರೆಂಬ್ಕು ಪಾರ್ಟಿಯ ಲೋಕಸಭಾ ಉಪನಾಯಕ ಶ್ರೀ ಸಾ ಮಾ ರ್ ಮುಖರ್ಜಿ ಹೇಳಿದರು.

★

ಚುನಾವಣಾ ಸುಧಾರಣೆ

ನವದೆಹಲಿ— ಸೋಷಲಿಸ್ಟ್ ಪಾರ್ಟಿಯು, ಚುನಾವಣಾ ಸುಧಾರಣೆಯು ಪೂರ್ಣ ವಿಷಯವಾಗಿದೆಯೆಂದೂ, ಆದಕ್ಕಾಗಿ ಚುನಾವಣಾ ಕಮಿಷನರರು ಈ ಬಗ್ಗೆ ಚರ್ಚಿಸಲು ಎಲ್ಲಾ ರಾಜಕೀಯ ಪಕ್ಷಗಳ ಸಭೆ ನಡೆಸಬೇಕೆಂದೂ ಒತ್ತಾಯಮಾಡಿದೆ

★

ತೀರ್ಥ ಆಕ್ಷೇಪಣೆ

ಹುಬ್ಬಳ್ಳಿ—ಸರಕಾರವು ಹೆಚ್ಚು ಲಾಭದಿಂದ ರೇಷನ್ ಅಕ್ಕಿಯನ್ನು ಕ್ವಿಂಟಾಲಿಗೆ ರೂ. 180 ರಂತೆ ಮಾರುವ ಬಗ್ಗೆ ಇಲ್ಲಿ ಜರು ಜನಸಂಘ ತೀವ್ರವಾಗಿ ಆಕ್ಷೇಪಿಸಿದೆ

★

ವೇದಾಂತದ ಮಹಿಮೆ

ನವದೆಹಲಿ— ವೇದಾಂತವನ್ನು ಈಗಿನ ಕಾಲದ ಜೀವಿತಕ್ಕೆ ಅಳವಡಿಸಿಕೊಂಡ ಭಾರತವು ಎದುರಿಸುತ್ತಿರುವ ಎಲ್ಲಾ ಸಮಸ್ಯೆಗಳೂ ಪರಿಹಾರವಾಗುವುದೆಂದು ಮಂತ್ರಿ ಶ್ರೀ ಟಿ. ಎ ಪೈರವರು ಶ್ರೀ ವಿವೇಕಾನಂದರ ಜನ್ಮದಿನೋತ್ಸವದಂದು ಹೇಳಿದರು.

ವುಡ್‌ಲಾಂಡ್ಸ್ 7 2 75 ರಿಂದ

ಅಮೋಘ ಆರಂಭ

ದಿ ಚೀಟ್

ಅಪೂರ್ವ ಈಸ್ಟ್‌ಮನ್ ಕಲರ್ ಹಿಂದಿ ಕಲಾಕೃತಿ

ಪಾತ್ರ– ವಿನೋದ್ ಖನ್ನ ಮೌಸಮಿ ಚಟರ್ಜಿ ದಿನ ೫ ಪ್ರದರ್ಶನಗಳು

ಅಪೆರಾ 14 2 75 ರಿಂದ

ಬಾಲನಾಗಮ್ಮ

ಅಮೋಘ ತೆಲಗು ಚಿತ್ರ

ಪಾತ್ರ – ಎನ್ ಟಿ ಆರ್ ಅಂಜಲಿ ದೇವಿ ದಿನ 3 ಪ್ರದರ್ಶನಗಳು

Contribute Liberally to the National Defence Fund

ಭಾರತದಲ್ಲಿ ಗೋವಧೆ ಪೂರ್ಣ ನಿಶ್ಶೇದವಾಗಲಿ.



SHAKTI SUDHA

A Superb Tonic

Quality Printing Neat Binding

Lakshminarasimha Press

Sivarampet Mysore 1

Protect the Cow

Help The Gorakshana

—Humanitarian Propoganda Monthly—

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram Mysore